## <u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>
## <u>ಹುಕ್ಕೇರಿ</u>

**ಸಿಸಿ ನಂ ಃ 871/2019**
**ಸಿಡಬ್ಲು ಃ 3**
**ಪಿಡಬ್ಲು ಃ 4**

**ಹೆಸರು** ಃ ದುಂಡಪ್ಪಾ ಸಿದ್ರಾಮ ಕಿಂವಡಾ
**ವಯಾ** ಃ 46 ವರ್ಷ
**ಉದ್ಯೋಗ** ಃ ಗೌಂಡಿ ಕೆಲಸ
**ವಾಸ** ಃ ಅಂಕಲೆ ತಾಃ ಹುಕ್ಕೇರಿ

**(ದಿನಾಂಕಃ 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**<u>ಮುಖ್ಯ ವಿಚಾರಣೆ ಃ ಸಸಅಃರವರಿಂದ ಸರಕಾರದ ಪರವಾಗಿ ಃ</u>**

ಚಾಸಾ-2 ನನಗೆ ಗೊತ್ತಿಲ್ಲ. ಸುಮಾರು 3-4 ವರ್ಷಗಳ ಹಿಂದೆ ನಾನು ಸಂಕೇಶ್ವರ ಬಸ್ ನಿಲ್ದಾಣದಲ್ಲಿ ಪೋಲಪಿಸರ ಕೋರಿಕೆ ಮೇರೆಗೆ ಬಿಳಿ ಹಾಳೆಗೆ ಸಹಿ ಮಾಡಿದ್ದೇನೆ. ನನ್ನ ಸಹಿ ಏಜಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

<u>**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -</u>

ದಿನಾಂಕ 16-03-2019 ರಂದು ನಾನು ಮತ್ತು ಚಾಸಾ-2 ಬೆಳಿಗ್ಗೆ 9-30 ಕ್ಕೆ ಸಂಕೇಶ್ವರ ಬಸ್ ನಿಲ್ದಾಣದ ಹತ್ತಿರ ನಿಂತಿದ್ದರು, ಆ ಸಮಯದಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ-2 ಇವರನ್ನು ತಮ್ಮ ಜೀಪಿನಲ್ಲಿ ಬಸಾಪೂರ ಗ್ರಾಮಕ್ಕೆ ಕರೆದುಕೊಂಡು ಹೋದರು ಹಾಗೂ ಅಲ್ಲಿ ಆರೋಪಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಳು ಎಂದು ಖಚಿತ ಮಾಹಿತಿ ಬಂದ ಮೇರೆಗೆ ನಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಆಗ ಬೆಳಿಗ್ಗೆ 11-00 ಗಂಟೆಯಾಗಿತ್ತು ಹಾಗೂ ಆರೋಪಿ ಮನೆಗೆ ಹೋದಾಗ 11-05 ಆಗಿತ್ತು ಎಂದರೆ ಸರಿಯಲ್ಲ. ಅಲ್ಲಿ

ಅಬಕಾರಿ ಪೋಲಿಸರ ಜೊತೆಗೆ ಮಹಿಳಾ ಪೋಲಿಸರೂ ಸಹ ಇದ್ದು , ಅವರ ಹೆಸರು ಕೇಳಲಾಗಿ , ಆರೋಪಿಯು ತೊದಲಿಸುತ್ತಿದ್ದಳು, ಆ ಸಮಯದಲ್ಲಿ ಪೋಲಿಸರು ಅಲ್ಲಿಯೇ ಶೋಧಾನಾ ಆಧಾರ ತಯಾರು ಮಾಡಿ ಆರೋಪಿ ಮನೆ ಶೋಧನೆ ಮಾಡಲಾಗಿ ಅಡುಗೆ ಮನೆಯ ಕಟ್ಟೆಯ ಹತ್ತಿರ ಕೆಳಗಡೆ ಬಟ್ಟೆ ಕೆಳಗೆ ಏನೋ ಮುಚ್ಚಿ ಟ್ಟಿರುವುದು ಕಂಡು ಬಂತು ಎಂದರೆ ಸರಿಯಲ್ಲ. ಅಲ್ಲಿ **10** ಲೀಟರ ಸಾಮರ್ಥ್ಯದ ಹಳದಿ ಬಣ್ಣದ ಪ್ಲಾಸ್ಟಿಕ ಕೊಡ ಇತ್ತು ಎಂದರೆ ಸರಿಯಲ್ಲ. ಅದರಲ್ಲಿ ಕಳ್ಳಭಟ್ಟಿ ಸಾರಾಯಿ ಇರುವುದು ಖಚಿತ ಪಡಿಸಿಕೊಂಡು ನಂತರ ಮಹಿಳೆಯನ್ನು ವಿಚಾರ ಮಾಡಲಾಗಿ ಅವರು ಯಾವುದೇ ವಿಚಾರವನ್ನು ಹೇಳಲಿಲ್ಲ ಎಂದರೆ ಸರಿಯಲ್ಲ. ಮಹಿಳಾ ಪೋಲಿಸರ ಮೂಲಕ ಆರೋಪಿಯನ್ನು ದಸ್ತಗೀರ ಮಾಡಿಕೊಂಡು ಪ್ಲಾಸ್ಟಿಕ ಕೊಡದಲ್ಲಿದ್ದ ಕಳ್ಳಭಟ್ಟಿ ಸಾರಾಯಿಂದ **750** ಎಂ ಲ್ ಪ್ಲಾಸ್ಟಿಕ ಬಾಟಲಿಯಲ್ಲಿ ತೆಗೆದುಕೊಂಡು ನಮ್ಮ ಸಮಕ್ಷಮ ಸಹಿ ಪಡೆದುಕೊಂಡು ಅದಕ್ಕೆ ಚೀಟಿ ಅಂಟಿಸಿದರು ಎಂದರೆ ಸರಿಯಲ್ಲ. ಅಲ್ಲಿ **11-40** ರಿಂದ **12-50** ರ ವರೆಗೆ ಪಂಚನಾಮ ಮಾಡಿ ನಮ್ಮ ಸಹಿ ಸ್ಥಳದ್ಲಿ ಪಡೆದುಕೊಂಡರು ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ** ಆರೋಪಿ ಪರ ಶ್ರೀ ಆರ್ ಬಿ ಸಿ ವಕೀಲರಿಂದ -

ಏನೂ ಇರುವುದಿಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**

**ಹುಕ್ಕೇರಿ**

**ಸಿಸಿ ನಂ ಃ 871/2019**

**ಸಿಡಬ್ಲು ಃ 2**

**ಪಿಡಬ್ಲು ಃ 3**

**ಹೆಸರು** ಃ ಪ್ರಕಾಶ ಚೌಗಲಾ

**ವಯಾ** ಃ 45 ವರ್ಷ

**ಉದ್ಯೋಗ** ಃ ಒಕ್ಕಲುತನ

**ವಾಸ** ಃ ಸಂಸುದ್ದಿ ಗಲ್ಲಿ ಸಂಕೇಶ್ವರ ತಾಃ ಹುಕ್ಕೇರಿ

**(ದಿನಾಂಕಃ 26-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ ಃ ಸಸಅಃರವರಿಂದ ಸರಕಾರದ ಪರವಾಗಿ ಃ**

ಚಾಸಾ-3 ನನಗೆ ಗೊತ್ತಿಲ್ಲ. ಸುಮಾರು 3-4 ವರ್ಷಗಳ ಹಿಂದೆ ನಾನು ಸಂಕೇಶ್ವರ ಬಸ್ ನಿಲ್ದಾಣದಲ್ಲಿ ಒಂದು ದಾಖಲೆಗೆ ಸಹಿ ಮಾಡಿದ್ದೇನೆ. ಅಲ್ಲಿ ನನ್ನ ಜೊತೆಗೆ ಚಾಸಾ-3 ಮತ್ತು ಆರೋಪಿ ಅಲ್ಲಿದ್ದರು.ಅಲ್ಲಿ ಅಬಕಾರಿ ಪೋಲಿಸಿನವರು ಇದ್ದರು. ಆರೋಪಿ ಬಸಾಪೂರ ಗ್ರಾಮದವರು. ಪೋಲಿಸಿನವರು ಆರೋಪಿಯನ್ನು ಹಿಡಿದಿದ್ದರು. ಜ್ಞಾಮೀನು ಎಂದು ನನ್ನ ಸಹಿ ಮಾಡಿಸಿಕೊಂಡರು. ಆರೋಪಿ ಸಾರಾಯಿ ಮಾರಾಟ ಮಾಡುತ್ತಿದ್ದ ಎಂದು ಹೇಳಿದರು. ಆಗ ಸಂಜೆ 6-30 ಗಂಟೆಯಾಗಿತ್ತು. ಸದರಿ ದಾಖಲೆ ಈಗ ನೋಡುತ್ತಿದ್ದೇನೆ. ಅದರಲ್ಲಿ ನನ್ನ ಸಹಿ ಇದೆ. ಸದ್ರಿ ದಾಖಲೆ ರೇಡ ಪಂಚನಾಮೆ ಆಗಿದ್ದು, ಅದನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸದ್ರಿಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ** ಸರಕಾರಿ ಸಹಾಯಕ ಅಭಿಯೋಜಕರಿಂದ -

ದಿನಾಂಕ **16-03-2019** ರಂದು ನಾನು ಮತ್ತು ಚಾಸಾ-**3** ಬೆಳಿಗ್ಗೆ **9-30** ಕ್ಕೆ ಸಂಕೇಶ್ವರ ಬಸ್ ನಿಲ್ದಾಣದ ಹತ್ತಿರ ನಿಂತಿದ್ದರು ಎಂದರೆ ನಿಜ. ಆ ಸಮಯದಲ್ಲಿ ಪೋಲಿಸರು ನನ್ನನ್ನು ಮತ್ತು ಚಾಸಾ-**3** ಇವರನ್ನು ತಮ್ಮ ಜೀಪಿನಲ್ಲಿ ಬಸಾಪೂರ ಗ್ರಾಮಕ್ಕೆ ಕರೆದುಕೊಂಡು ಹೋದರು ಎಂದರೆ ನಿಜ. ಅಲ್ಲಿ ಆರೋಪಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ಮಾರಾಟ ಮಾಡುತ್ತಿದ್ದಳು ಎಂದು ಖಚಿತ ಮಾಹಿತಿ ಬಂದ ಮೇರೆಗೆ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು ಎಂದರೆ ನಿಜ. ಆಗ ಬೆಳಿಗ್ಗೆ **11-00** ಗಂಟೆಯಾಗಿತ್ತು ಎಂದರೆ ನಿಜ. ಆರೋಪಿ ಮನೆಗೆ ಹೋದಾಗ **11-05** ಆಗಿತ್ತು ಎಂದರೆ ನಿಜ. ಅಲ್ಲಿ ಅಬಕಾರಿ ಪೋಲಿಸರ ಜೊತೆಗೆ ಮಹಿಳಾ ಪೋಲಿಸರೂ ಸಹ ಇದ್ದು , ಅವರ ಹೆಸರು ಕೇಳಲಾಗಿ , ಆರೋಪಿಯು ತೊದಲಿಸುತ್ತಿದ್ದಳು, ಆ ಸಮಯದಲ್ಲಿ ಪೋಲಿಸರು ಅಲ್ಲಿಯೋ ಶೋಧಾನಾ ಆಧಾರ ತಯಾರು ಮಾಡಿ ಆರೋಪಿ ಮನೆ ಶೋಧನೆ ಮಾಡಲಾಗಿ ಅಡುಗೆ ಮನೆಯ ಕಟ್ಟೆಯ ಹತ್ತಿರ ಕೆಳಗಡೆ ಬಟ್ಟೆ ಕೆಳಗೆ ಏನೋ ಮುಚ್ಚಿ ಟ್ಟಿರುವುದು ಕಂಡು ಬಂತು ಎಂದರೆ ನಿಜ. ಅಲ್ಲಿ **10** ಲೀಟರ ಸಾಮರ್ಥ್ಯದ ಹಳದಿ ಬಣ್ಣದ ಪ್ಲಾಸ್ಟಿಕ ಕೊಡ ಇತ್ತು ಎಂದರೆ ನಿಜ. ಅದರಲ್ಲಿ ಕಳ್ಳಭಟ್ಟಿ ಸಾರಾಯಿ ಇರುವುದು ಖಚಿತ ಪಡಿಸಿಕೊಂಡು ನಂತರ ಮಹಿಳೆಯನ್ನು ವಿಚಾರ ಮಾಡಲಾಗಿ ಅವರು ಯಾವುದೇ ವಿಚಾರವನ್ನು ಹೇಳಲಿಲ್ಲ ಎಂದರೆ ನಿಜ. ಮಹಿಳಾ ಪೋಲಿಸರ ಮೂಲಕ ಆರೋಪಿಯನ್ನು ದಸ್ತಗೀರ ಮಾಡಿಕೊಂಡು ಪ್ಲಾಸ್ಟಿಕ ಕೊಡದಲ್ಲಿದ್ದ ಕಳ್ಳಭಟ್ಟಿ ಸಾರಾಯಿಂದ **750** ಎಂ ಲ್ ಪ್ಲಾಸ್ಟಿಕ ಬಾಟಲಿಯಲ್ಲಿ ತೆಗೆದುಕೊಂಡು ನಮ್ಮ ಸಮಕ್ಷಮ ಸಹಿ ಪಡೆದುಕೊಂಡು ಅದಕ್ಕೆ ಚೀಟಿ ಅಂಟಿಸಿದರು ಎಂದರೆ ನಿಜ. ಅಲ್ಲಿ **11-40** ರಿಂದ **12-50** ರ ವರೆಗೆ ಪಂಚನಾಮ ಮಾಡಿ ನಮ್ಮ ಸಹಿ ಸ್ಥಳದ್ಲಿ ಪಡೆದುಕೊಂಡರು ಎಂದರೆ ನಿಜ. ದಸ್ತಗೀರ ಮಾಡಿದಂತಹ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಇರುವುದನ್ನು ಸಾಕ್ಷಿ ಗುರುತಿಸಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್ ಬಿ ಸಿ ವಕೀಲರಿಂದ -**

ನನ್ನನ್ನು ಹೊರತು ಪಡಿಸಿ ಆ ಸಮಯದಲ್ಲಿ ಯಾರೂ ಇರಲಿಲ್ಲ ಎಂದರೆ ನಿಜ. ನಾನು ಸಹಿ ಮಾಡುವಾಗ ಖುಲ್ಲಾ ಹಾಳೆ ಇತ್ತು ಎಂದರೆ ನಿಜ. ನಾನು ಸಹಿಯನ್ನು ಸಂಕೇಶ್ವರ ಬಸ್ ನಿಲ್ದಾಣದಲ್ಲಿ ಮಾಡಿದ್ದೇನೆ ಎಂದರೆ ನಿಜ. ಪಂಚನಾಮೆಯನ್ನು ಯಾರು , ಏಕೆ ಹಾಗೂ ಯಾವ ಕಾರಣಕ್ಕೆ ಮಾಡಿದರು ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ನಾನು ನನ್ನ ಜೀವನದಲ್ಲಿ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ನಿಜ. ನನ್ನ ಸಮಕ್ಷಮ

ಯಾವುದೆ ವಸ್ತುಗಳನ್ನು ತೆಗೆದುಕೊಂಡಿಲ್ಲ ಎಂದರೆ ನಿಜ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮನೆಯನ್ನು ಶೋಧನೆ ಮಾಡಿಲ್ಲ ಎಂದರೆ ನಿಜ. ನಾನು ಮುಖ್ಯ ವಿಚಾರಣಯಲ್ಲಿ ಹೇಳಿದ ವಿಕಿಚಾರವನುನ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ನಿಜ. ಇದನ್ನು ಹೊರತು ಪಡಿಸಿ ಯಾವ ಕಾಲದಲ್ಲೂ ಬೇರೆ ಎಲ್ಲಿಯೂ ಹೇಳಿಲ್ಲ ಎಂದರೆ ನಿಜ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**